# "ಡಾ. ಚಂದ್ರಶೇಖರ ಕಂಬಾರರ 'ಸಿರಿಸಂಪಿಗೆ' ನಾಟಕದಲ್ಲಿ ಸ್ತ್ರೀ ಸಂವೇದನೆ"

**ಮಲ್ಲಪ್ಪ ಚನ್ನಭತ್ತಿ**
ಸಂಶೋಧನ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
mallucm1990@gmail.com

ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಜಾನಪದ ಸತ್ತ್ವವನ್ನು ಹೀರಿಕೊಂಡು ದೇಶೀಯತೆಯನ್ನು ಜಾಗೃತಗೊಳಿಸಿ ಜ್ಞಾನಪೀಠದ ಎತ್ತರಕ್ಕೆ ಏರಿದ ಡಾ. ಚಂದ್ರಶೇಖರ ಕಂಬಾರರ ಸಾಹಿತ್ಯವು ಕನ್ನಡದ ಕೀರ್ತಿಯನ್ನು ಸಮೃದ್ಧಿಗೊಳಿಸಿದೆ. ಕಂಬಾರರು ಕವಿಗಳಾಗಿ, ಕಾದಂಬರಿಕಾರರಾಗಿ, ಸಂಶೋಧಕರಾಗಿ, ಜಾನಪದ ವಿದ್ವಾಂಸರಾಗಿ, ನಾಟಕಕಾರರಾಗಿ ಇನ್ನೂ ಮುಂತಾದ ವ್ಯಕ್ತಿತ್ವಗಳನ್ನು ಹೊಂದುವ ಮೂಲಕ ಪ್ರಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಇವರ ನಾಟಕ ಸಾಹಿತ್ಯವು ದೇಶೀಯ ಜಾನಪದ ಬೇರಿನಿಂದ ಹುಟ್ಟಿ ವಾಸ್ತವ ಸಾಮಾಜಿಕ ಪ್ರಜ್ಞೆಯ ಮೂಲಕ ಕವಲೊಡೆಯುತ್ತವೆ. ಇಂತಹ ನಾಟಕಗಳಲ್ಲಿ 'ಸಿರಿಸಂಪಿಗೆ' ನಾಟಕವು ಒಂದಾಗಿದೆ. ಕಂಬಾರರು ಈ ನಾಟಕದ ಮೂಲಕ ಪುರುಷನ ಅನೈಸರ್ಗಿಕ ಮನೋಭಾವನೆ ಹಾಗೂ ಪುರುಷನ ದ್ವಂದ್ವಾತ್ಮಕ ನಿಲುವುಗಳನ್ನು ತೆರೆದಿಡುವ ಮೂಲಕ ಸ್ತ್ರೀ ಜಗತ್ತನ್ನು ಚಿತ್ರಿಸುತ್ತಾರೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಅನುಭವಿಸುವ ದುಃಖ-ದುಮ್ಮಾನಗಳನ್ನು ವಿವರಿಸುವ ಮೂಲಕ ಪುರುಷನ ಕೇಡು ಹಾಗೂ ಈ ಕೇಡುಗಳಿಂದ ಮಹಿಳೆ ಜಾಗೃತಳಾಗಿ ಬದುಕಿನ ಪರಿಹಾರವನ್ನು ಕಂಡುಕೊಳ್ಳುವ ಬಗೆಯನ್ನು ಈ ನಾಟಕದಲ್ಲಿ ಚಿತ್ರಿಸಿದ್ದಾರೆ.

'ಸಿರಿಸಂಪಿಗೆ' ಹೆಸರೇ ಸೂಚಿಸುವಂತೆ ಮಹಿಳೆಯನ್ನೇ ಕೇಂದ್ರವಾಗುಳ್ಳ ನಾಟಕವಾಗಿದೆ. ಸಿರಿಸಂಪಿಗೆಯು ಗಂಡನಾದ ಶಿವನಾಗದೇವನ ದ್ವಂದ್ವಾತ್ಮಕ ನಿಲುವುಗಳಿಂದ ಯಾವ ತೆರನಾದ ಕಷ್ಟ-ಕೋಟಲೆಗಳನ್ನು ಅನುಭವಿಸುತ್ತಾಳೆ ಎಂಬ ವಿಚಾರವನ್ನು ತಿಳಿಸುತ್ತದೆ. ಗಂಡು-ಹೆಣ್ಣುಗಳು ಯೌವನಕ್ಕೆ ಕಾಲಿಡುವುದು ಒಂದು ನಿಸರ್ಗ ಸಹಜ ಪ್ರಕ್ರಿಯೆ; ಯೌವ್ವನಕ್ಕೆ ಕಾಲಿಟ್ಟ ಹೆಣ್ಣು-ಗಂಡುಗಳು ಸಂತಾನ ಪಡೆಯಲು ಹಾಗೂ ಲೈಂಗಿಕ ಆಸೆಯನ್ನು ಈಡೇರಿಸಿಕೊಳ್ಳಲು ಮದುವೆ ಎಂಬ ಸಂಸ್ಕೃತಿ-ಸಂಪ್ರದಾಯಕ್ಕೆ ಒಳಗಾಗುವುದು ಸಾಮಾಜಿಕ ಮಾನವ ಸಹಜ ಪ್ರಕ್ರಿಯೆಯಾಗಿದೆ. ಇಂತಹ ನಿಸರ್ಗ ಸಹಜವಾದ ಕಾಮವನ್ನು ಸಂಸ್ಕೃತಿಗೊಳಿಸದೆ ವಿಕೃತಿಯನ್ನು ಕಾಣುವ ಗಂಡು-ಹೆಣ್ಣುಗಳು ದುರಂತದಲ್ಲಿ ಅವಸಾನ ಹೊಂದುತ್ತವೆ ಎಂಬ ಸತ್ಯವನ್ನು ಈ ನಾಟಕವು ತಿಳಿಸುತ್ತದೆ.

ಈ ನಾಟಕವು ಪ್ರಾರಂಭದಲ್ಲಿ ಭಾಗವತ ಮತ್ತವನ ಮೇಳದ ಹಾಡಿನ ಮೂಲಕ ಸಂಕ್ಷಿಪ್ತವಾಗಿ ಪರಿಚಯಿಸುತ್ತಾ; ಶಿವನಾಗದೇವನ ತಾಯಿಯಾದ ಮಾಯಾವತಿಯ ಸಂಭಾಷಣೆಯ ಮೂಲಕ ಪ್ರಾರಂಭವಾಗುತ್ತದೆ. ಇವಳು ಹೇಳುವಂತೆ, "ಅಯ್ಯಾ, ಧರೆಯಲ್ಲಿ ಧರ್ಮದಿಂದ ಮೆರೆಯುವಂತಹ ಶಿವಪುರದ ಅರಸನಾದ ನಾಗನಾಯಕನ ಧರ್ಮಪತ್ನಿ ಮಾಯಾವತಿ ಎನಿಸಿಕೊಂಡವಳು ನಾನು. ಬಹುಕಾಲ ಧರ್ಮದಿಂದ ರಾಜ್ಯಭಾರ ಮಾಡಿದ ನನ್ನ ಪತಿದೇವರು ಅಕಾಲದಲ್ಲಿ ಕಾಲಾಧೀನರಾದರು. ಅನಂತರ ಪತಿದೇವರಂತೆ ನಾನು ಕೂಡಾ ಪ್ರಜಾಹಿತ ಪಾಲನೆಯಲ್ಲಿ ಎಳ್ಳಷ್ಟೂ ಕುಂದುಂಟಾಗದಂತೆ ನೋಡಿಕೊಂಡು ಬಂದಿರುವೆನು. ಇನ್ನು ನನ್ನ ಸಂಸಾರಿಕ ವಿಷಯಗಳನ್ನು ಸಾರಾಂಶವಾಗಿ ಹೇಳುವುದಾದರೆ ನನ್ನ ಪತಿದೇವರು ಅಗಲಿದಾಗ ಮಗನಾದ ಶಿವನಾಗದೇವನಿಗೆ ಒಂದು ವರ್ಷ ತುಂಬಿದ್ದಿತಷ್ಟೆ. ಪ್ರಜಾಪಾಲನೆಯ ಜೊತೆಗೆ ಆತನ ಲಾಲನೆ-ಪಾಲನೆಯನ್ನು ಸುಗಮವಾಗಿ ನಡೆಸಿಕೊಂಡು ಬಂದ ನಾನು ಮಗನ ಬಾಲಲೀಲೆಗಳನ್ನು ನೋಡಿ ಸಂತೋಷಪಟ್ಟೆ"[1] ಎಂದು ಹೇಳುತ್ತಾ ಮಗನಾದ ಶಿವನಾಗದೇವನು ಸಕಲ ವಿದ್ಯೆಗಳನ್ನು ಪಡೆಯುತ್ತಾ ಬೆಳೆದು ಯೌವನಕ್ಕೆ ಕಾಲಿಟ್ಟ ವಿಚಾರವನ್ನು ಹೇಳುತ್ತಾಳೆ. ಮಾಯಾವತಿ ಹೇಳುವ ಈ ಮಾತುಗಳಲ್ಲಿ ಮಹಿಳೆಯ ಧೈರ್ಯ-ಸ್ಥೈರ್ಯದ ವ್ಯಕ್ತಿತ್ವವನ್ನು ತಿಳಿಸುತ್ತದೆ. ಪ್ರಾಚೀನ ರಾಜ ಪರಂಪರೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ರಾಜನು ಅಕಾಲಿಕ ಮರಣವಾದರೆ ರಾಜನ ಧರ್ಮಪತ್ನಿ ರಾಣಿಯಾಗಿ ಆಳ್ವಿಕೆಯನ್ನು ನಡೆಸುತ್ತಿದ್ದ ಉದಾಹರಣೆಯನ್ನು ಇಲ್ಲಿ ನೋಡುತ್ತೇವೆ. ಅಷ್ಟೇ ಅಲ್ಲದೆ ಮಕ್ಕಳ ಲಾಲನೆಯ ಪಾಲನೆಯ ಜವಾಬ್ದಾರಿಯನ್ನು ಅತ್ಯಂತ ಶ್ರದ್ಧೆಯಿಂದ ಮಾಡುವ ತಾಯಿಯ ವ್ಯಕ್ತಿತ್ವವನ್ನು ಕಂಬಾರರು ಇಲ್ಲಿ ತೆರೆದಿಡುತ್ತಾರೆ. ಅದರ ಜೊತೆಯಲ್ಲಿ ಗಂಡನನ್ನು ಕಳೆದುಕೊಂಡರೂ ಮಗುವಿನ ಮೂಲಕ ದುಃಖವನ್ನು ಮರೆತು; ಮಗುವಿಗೆ ಭವಿಷತ್ತಿನ ಭರವಸೆಯಾಗುವ ತಾಯಿಯ ಶ್ರೇಷ್ಠ ವ್ಯಕ್ತಿತ್ವವನ್ನು ಈ ಮೂಲಕ ಅನಾವರಣಗೊಳಿಸುತ್ತಾರೆ.

ಇಂತಹ ತಾಯಿಯ ವ್ಯಕ್ತಿತ್ವವನ್ನು ತಿಳಿದ ಕಾವ್ಯ ಗಾರುಡಿಗ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದ. ರಾ. ಬೇಂದ್ರೆಯವರು ತನ್ನ ಕಾವ್ಯನಾಮವನ್ನು 'ಅಂಬಿಕಾತನಯದತ್ತ' ಎಂದು ಬರೆದುಕೊಂಡಿರುವುದು ತಾಯಿಗೆ ಸಲ್ಲಿಸಿದ ದೊಡ್ಡ ಸ್ಥಾನವನ್ನು ನೆನಪಿಸುತ್ತದೆ. ಹೀಗೆ ಮಾಯಾವತಿಯು ಒಂದು ಹುಣ್ಣಿಮೆಯ ದಿನ ಕುಲದೇವರಿಗೆ ನೀಡುವ ನೈವೇದ್ಯದ ಹಾಲು ಒಡೆದುದನ್ನು ಅಪಶಕುನ ಎಂದು ಭಾವಿಸಿಕೊಳ್ಳುತ್ತಾಳೆ. ಈ ಅಪಶಕುನಕ್ಕೆ ಕುಲದೇವರು ಕಾರಣವನ್ನು ತಿಳಿಸಿದರೆಂದು ಈ ರೀತಿಯಾಗಿ ಹೇಳುತ್ತಾಳೆ, "ಮಗಳೇ ನಿನ್ನ ಮಗನಿಗೆ ಭಾರಿ ಕಂಟಕವುಂಟು; ಸ್ವರಭಂಗವಾದಾಗ ಸನ್ಯಾಸಯೋಗವಿದೆ, ತಪ್ಪಿದರೆ ಭಾಗಾದಿ ಕಾರಣವಾಗಿ ಮರಣವಿದೆ"[2] ಎಂದು ತಿಳಿದುಕೊಂಡು ಗಾಬರಿಯಿಂದ ಇದಕ್ಕೆ ಪರಿಹಾರವನ್ನು ಈ ಕುಲದೇವರಿಂದಲೇ ಕೇಳಿಕೊಳ್ಳುತ್ತಾಳೆ. "ಕುಲದೇವರು ಕಿರುನಗೆ ಸೂಸಿ 'ಮಗನ ಸ್ವರಭಂಗವಾದಾಗ ತಡಮಾಡದೆ ಮದುವೆ ಮಾಡು. ನೀರಲ್ಲಿ ನೆರಳು ನೋಡಿಕೊಳ್ಳದ ಹಾಗೆ ನೋಡಿಕೋ ಜಾಗೃತೆ' ಎಂದು ಹೇಳಿ ಮಾಯವಾದರು."[3] ಈ ರೀತಿಯಾಗಿ ಪರಿಹಾರವನ್ನು ತಿಳಿದ ಮಾಯಾವತಿಯು ತನ್ನ ಮಗನಾದ ಶಿವನಾಗನನ್ನು ಈ ಸಂದರ್ಭಗಳಿಂದ ಚೆನ್ನಾಗಿ ರಕ್ಷಿಸುತ್ತಾ ಬೆಳೆಸುತ್ತಾಳೆ. ಮಾಯಾವತಿಯ ಈ ಮೇಲಿನ ಮಾತುಗಳು ಹಾಗೂ ಅವಳು ಕಲ್ಪಿಸಿಕೊಂಡ ಎಲ್ಲ ವಿಚಾರಗಳು ತಾಯ್ತನ ಎಂಬುದು ಹೇಗಿದೆ ಎಂಬುದನ್ನು ತಿಳಿಸುತ್ತವೆ. ಯಾವುದೇ ವಸ್ತು ಏನಾದರೂ ವಿಕೃತಿಯನ್ನು ಉಂಟು ಮಾಡಿದರು ಅದನ್ನು ತನ್ನ ಮಗನಿಗೆ ಆದ ವಿಕೃತಿಯೇನೋ ಎಂದು ಕಲ್ಪಿಸಿಕೊಳ್ಳುವ ತಾಯಿಯು ಎಲ್ಲ ವಸ್ತುಗಳಲ್ಲಿಯೂ ತನ್ನ

ಮಗನನ್ನೇ ಕಾಣುತ್ತಿದ್ದಳು ಎಂಬ ವಿಚಾರ ತಿಳಿದುಬರುತ್ತದೆ. ತಾಯಿಯು ಯಾವುದೇ ಕೆಲಸ ಕಾರ್ಯದಲ್ಲಿ ತೊಡಗಿದ್ದರೂ ಮಕ್ಕಳ ಮೇಲೆಯೇ ಧ್ಯಾನಸ್ಥಳಾಗಿರುತ್ತಾಳೆ ಎಂಬುದನ್ನು ಮಾಯಾವತಿಯ ಮೂಲಕ ತಿಳಿಯಬಹುದಾಗಿದೆ.

ಶಿವನಾಗದೇವನ ಮದುವೆಯ ವಿಚಾರವಾಗಿ ಕರೆಯಿಸಿಕೊಂಡಂತಹ ಮಾಯಾವತಿಯು, "ಕಂದಾ ಅತಿಮುಖ್ಯವಾದ ವಿಚಾರವೊಂದನ್ನು ವಿನಿಮಯ ಮಾಡಲಿಕ್ಕಾಗಿ ನಿನ್ನನ್ನು ಕರೆಸಿದ್ದಾಯ್ತು. ಅಬಲೆಯಾಗಿ ವೃದ್ಧೆಯಾಗುತ್ತಿರುವ ನನಗೆ ಇನ್ನು ರಾಜ್ಯದ ಜವಾಬ್ದಾರಿ ನೀಗುವುದಿಲ್ಲವಾಗಿ ನಿನಗೆ ಸೂಕ್ತ ವಿಧಿಯಲ್ಲಿ ವಿವಾಹ ವಿಧಿಯ ನೆರವೇರಿಸಿ ಪಟ್ಟಾಭಿಷೇಕ ಗೈದು ಮುಂದಿನ ಜೀವನವನ್ನು ವಿಶ್ರಾಂತವಾಗಿ ಕಳೆಯಬೇಕೆಂದು ನನ್ನ ಆಸೆ. ಅದಕ್ಕೆಂದೇ ವನಪುರಕ್ಕೆ ಪುರದ ಹಿರಿಯರನ್ನಟ್ಟಿ, ಅಲ್ಲಿಯ ಪುಷ್ಪರಾಜನ ಪುತ್ರಿ ಸಿರಿಸಂಪಿಗೆಯನ್ನು ನೋಡಿ ಒಪ್ಪಿ ಬಂದದ್ದಾಗಿದೆ. ಈಗ ನಿನ್ನ ಸಮ್ಮತಿ ಸಿಕ್ಕಬೇಕಷ್ಟೆ"[4] ಎಂದು ಹೇಳುವ ತಾಯಿಯು ಇಲ್ಲಿಯವರೆಗೆ ತಾನು ಕಾಪಾಡಿಕೊಂಡು ಬಂದಂತಹ ರಾಜ್ಯಭಾರವನ್ನು ಮಗನಿಗೆ ಒಪ್ಪಿಸುವ ಸಂದರ್ಭವನ್ನು ತಿಳಿಸುತ್ತದೆ. ಇಲ್ಲಿ ಸ್ತ್ರೀಯಾದವಳು ವಿಶ್ರಾಂತಿಯನ್ನು ಬಯಸುವ ವಿಚಾರ ಬರುತ್ತದೆ. ಮಹಿಳೆಯು ಯೌವ್ವನದಿಂದ ಮುಪ್ಪಿನಾವಸ್ಥೆಗೆ ಬರುವಾಗ ಒಂದಿಷ್ಟು ಕೆಲಸ ಕಾರ್ಯಗಳಿಂದ ವಿಶ್ರಾಂತಿಯ ಅಗತ್ಯದ ಕುರಿತು ಇಲ್ಲಿ ತಿಳಿಯಬಹುದಾಗಿದೆ. ಶಿವನಾಗದೇವನು ಮದುವೆಯನ್ನು ನಿರಾಕರಿಸುತ್ತ ಬಂದಿರುತ್ತಾನೆ. ತಾಯಿಯಾದ ಮಾಯಾವತಿಯು ತನ್ನ ಅಳಲನ್ನು ತೋಡಿಕೊಂಡಾಗ ರಾಜಕುಮಾರನು, "ದಯಮಾಡಿ ಅಂತಹ ಮಾತನಾಡಬೇಡಿ ತಾಯಿ. ನಿನ್ನ ಮನಸ್ಸಿಗೆ ನೋವಾಗಿದ್ದರೆ ಕ್ಷಮಿಸು. ನೀವಾಯ್ದ ಕನ್ನೆಯರಲ್ಲಿ ಒಂದಿಲ್ಲೊಂದು ಕೊರತೆ ಇದೆಯಾಗಿ ಮದುವೆ ಬೇಡವೆಂದನೇ ಹೊರತು ಅನ್ಯ ಕಾರಣವಿಲ್ಲ."[5] ಇದು ಪುರುಷನಾದವನು ಹೆಣ್ಣಿನ ಬಗ್ಗೆ ಇರುವ ಪೂರ್ವಾಗ್ರಹ ಪೀಡಿತ ಮನಸ್ಸಿನ ಸ್ಥಿತಿಯನ್ನು ತಿಳಿಸುತ್ತದೆ. ಇಲ್ಲಿ ಕಂಬಾರರ ಮುಖ್ಯ ಆಶಯವಿರುವುದು ಪುರುಷನು ಹೆಣ್ಣಿನ ಕೊರತೆಗಳನ್ನು ಎಣಿಸದೇ ತನ್ನ ಕೊರತೆಗಳನ್ನು ತಿಳಿದು ಜೀವನ ನಡೆಸಬೇಕೆಂಬುದಾಗಿದೆ.

ರಾಜಕುಮಾರನಾದ ಶಿವನಾಗದೇವನು 'ಕೊರತೆಯ ಕನ್ನೆ' ಎಂದು ಪ್ರಸ್ತಾಪಿಸಿದಾಗ ತಾಯಿಯು ಹೇಳುವ ಮಾತು, "ಕೊರತೆಯಿಲ್ಲದ ಕನ್ನೆ ಯಾವಳಿದ್ದಾಳೆ ಕುಮಾರ? ಅಂಥ ಕನ್ನೆ ಬೇಕೇ ಬೇಕೆಂದರೆ ನೀನೆ ನಿನ್ನ ಹೆಂಡತಿಯಾಗಬೇಕಷ್ಟೆ"[6] ಎಂದು ಹೇಳುವ ಮಾತಿನಲ್ಲಿ ತನ್ನನ್ನು ತಾನು ಅರಿತುಕೊಳ್ಳುವ ಮಾರ್ಗವನ್ನು ಸೂಚಿಸುತ್ತಾಳೆ. ಮನುಷ್ಯರೆಂದ ಮೇಲೆ ಪರಿಪೂರ್ಣರು ಎಂದು ಯಾರೂ ಇಲ್ಲ ಎಂಬ ಸಂದೇಶ ಇಲ್ಲಿದೆ. ನಾಟಕದ ಮಧ್ಯ ಮಧ್ಯದಲ್ಲಿ ಅವಳಿ ಜವಳಿ ಎಂಬ ಇಬ್ಬರು ಪುರುಷರ ಮನಸ್ಥಿತಿಗಳ ಕುರಿತು ಕಂಬಾರರು ವಿನೋದಮಯವಾಗಿ ಚಿತ್ರಿಸುತ್ತಾರೆ. ಇವರಿಬ್ಬರೂ ಶಿವಪುರದ ಆಸ್ಥಾನದ ವಿದೂಷಕರಾಗಿದ್ದು; ಇವರಿಬ್ಬರಲ್ಲಿ ಅಣ್ಣ ಯಾರು? ತಮ್ಮ ಯಾರು? ಎಂಬುದು ಇವರಿಗೆ ಗೊತ್ತಿರುವುದಿಲ್ಲ. ಅವಳಿಯು ಭಾಗವತನಿಗೆ ಒಂದು ಒಗಟನ್ನು ಹೇಳುತ್ತಾನೆ. "ಅದಿದ್ದರೆ ಇದಿಲ್ಲ, ಇದಿದ್ದರೆ ಅದಿಲ್ಲ. ಏನು ಹೇಳಿ?" ಎಂದು ಕೇಳುತ್ತಾನೆ. ಒಗಟು ಹಾಸ್ಯಮಯವಾಗಿ ಕಂಡರೂ ಇದು ಶಿವನಾಗದೇವನ ಮದುವೆ ವಿಚಾರಕ್ಕೆ ಸಂಬಂಧ ಕಲ್ಪಿಸಿ ಹೇಳಿದ ಒಗಟಾಗಿದೆ. ಈ ಒಗಟಿನ ಒಳಾರ್ಥವನ್ನು ಅವಳಿಯು ಈ ರೀತಿಯಾಗಿ ಹೇಳುತ್ತಾನೆ, "ನಮ್ಮ ಮಿತ್ರ ರಾಜಕುಮಾರ ಇದ್ದಾನಲ್ಲಾ – ಅವನಿಗೆ ಹೆಣ್ಣಿದೆ, ಮದುವೆ ಮಾಡಿಕೋ ಕುಮಾರ ಅಂದರೆ ಆಗೋದಿಲ್ಲಾ ಅಂತಾನೆ. ನಾವಿದ್ದೀವಲ್ಲ ಗಂಡಸರು, ಮದುವೆ ಬೇಕು ಅಂತೀವಿ. ಹೆಣ್ಣು ಕೊಡೋರಿಲ್ಲ"[7] ಎಂದು ಹೇಳುವ ಮಾತಿನಲ್ಲಿ ಒಂದು ಕಡೆ ಕಾಮವನ್ನು ನಿರಾಕರಿಸುವ ಮನಸ್ಸಿನ ಸ್ಥಿತಿಯಾದರೆ, ಇನ್ನೊಂದು ಕಡೆ ಕಾಮವನ್ನು ಬಯಸುವ ಪುರುಷನ ಮನಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಈ ಅವಳಿ, ಜವಳಿಯರಲ್ಲಿಯೂ ಪೂರ್ವಾಗ್ರಹ ಮನಸ್ಥಿತಿಯಿದೆ. ಇವರಿಬ್ಬರೂ ರೂಪದಲ್ಲಿ ಒಂದೇಯಾಗಿದ್ದು, ಮದುವೆಯಾದ ಹೆಂಡತಿಯು ಅವಳಿಯನ್ನು ಬಿಟ್ಟು ಜವಳಿಗೆ, ಜವಳಿಯನ್ನು ಬಿಟ್ಟು ಅವಳಿಯ ಜೊತೆಗೆ ಸೇರಿಬಿಟ್ಟರೆ ಏನು ಗತಿ ಎಂದು ಇವರಿಬ್ಬರು ಗೊಂದಲದಲ್ಲಿದ್ದಾರೆ. ಇದು ಪುರುಷ ವರ್ಗದ ದ್ವಂದ್ವಾತ್ಮಕ ಮನಸ್ಸಿನ ಸ್ಥಿತಿಯನ್ನು ತಿಳಿಸುವ ಮೂಲಕ ಸ್ತ್ರೀ ವರ್ಗವು ಇಂತಹ ಸ್ಥಿತಿಗಳಿಂದ ಜಾಗೃತಗೊಳ್ಳುವ ವಿಚಾರವನ್ನು ತಿಳಿಸುತ್ತದೆ.

ಭಾಗವತ ಹಾಗೂ ಅವಳಿ, ಜವಳಿಯರ ಸಂಭಾಷಣೆ ನಡೆದಿರುವ ಸಂದರ್ಭದಲ್ಲಿ ಕಮಲಳ ಆಗಮನವಾಗುತ್ತದೆ. ಕಮಲಳನ್ನು ನೋಡಿದ ಅವಳಿ, ಜವಳಿಯರು ಇವಳನ್ನು ಮದುವೆ ಮಾಡಿಕೊಳ್ಳುವ ವಿಚಾರವನ್ನು ತಿಳಿಸುತ್ತಾರೆ. ಅಷ್ಟೇ ಅಲ್ಲದೆ ಇವಳನ್ನು ಮದುವೆ ಆಗಲು ಇವರಿಬ್ಬರೂ ಜಗಳಾಡುತ್ತಿರುತ್ತಾರೆ. ಇದೇ ಸಂದರ್ಭದಲ್ಲಿ ಭಾಗವತನು ಹೇಳುವ ಮಾತು, "ಏನ್ರಯ್ಯಾ ಇದು? ಕಮಲ ಅಂದರೆ ಲಾಟರಿ ಅಂದುಕೊಂಡಿರಾ? ನಿಮ್ಮಿಬ್ಬರಲ್ಲಿ ತನಗೆ ಯಾರು ಇಷ್ಟ ಅಂತ ಹೇಳಬೇಕಾದವಳು ಅವಳಲ್ಲವೇ? ಕಮಲ, ಈ ನಿನ್ನ ಗಂಡನ್ನ ನೀನೇ ಆಯ್ದುಕೊಳ್ಳಮ್ಮಾ"[8] ಎಂದು ಹೇಳುವಲ್ಲಿ ಸ್ತ್ರೀಯ ಆಯ್ಕೆ ಸ್ವಾತಂತ್ರ್ಯವನ್ನು ಧ್ವನಿಸುತ್ತದೆ. ನಾಟಕದ ದೃಶ್ಯ ಮೂರರಲ್ಲಿ ರಾಜಕುಮಾರನು ದೀಪದ ಮೊಲ್ಲೆಯ ಕುರಿತು ಬಿದ್ದಂತಹ ಕನಸನ್ನು ಜವಳಿಗೆ ತಿಳಿಸುತ್ತಾನೆ. ಇದು ಪುರುಷನಲ್ಲಿ ಅಡಗಿರುವ ಸ್ತ್ರೀಯತ್ವ ಹಾಗೂ ಪುರುಷನ ಅಂತರ್ಗತವಾದ ಕಾಮದ ಬಯಕೆಯನ್ನು ತಿಳಿಸುತ್ತದೆ. ರಾಜಕುಮಾರನು ಊರಿನ ಹಿರಿಯರು ಹಾಗೂ ತನ್ನ ತಾಯಿಯನ್ನು ಸಾಕ್ಷಿಯಾಗಿ ಮಾಡಿಕೊಂಡು ತನ್ನ ಬೇಡಿಕೆಯನ್ನು ಪ್ರಸ್ತಾಪಿಸುತ್ತಾನೆ. ತನ್ನನ್ನು ಅರ್ಧರ್ಧ ಹೋಳಾಗುವಂತೆ ಸೀಳಬೇಕು ಎಂದು ಹೇಳುತ್ತಾ "ಅಷ್ಟಕ್ಕೇ ಮುಗಿಯಲಿಲ್ಲ. ತುಂಡು ಮಾಡಿದ ಒಂದೊಂದು ಹೋಳನ್ನು ಒಂದೊಂದು ಮಡಕೆಯಲ್ಲಿ ತುಂಬಿಡಬೇಕು. ಎರಡೂ ಮಡಕೆಗಳನ್ನು ಹೂವಿನಲ್ಲಿ ಹೂಳಬೇಕು. ಬರುವ ಹುಣ್ಣಿಮೆಯ ದಿನ ಎರಡೂ ಮಡಕೆಗಳನ್ನು ತೆರೆದು ನೋಡಿದರೆ ಒಂದರಿಂದ ಅಪ್ರತಿಮ ಸುಂದರನಾದ ರಾಜಕುಮಾರ, ಅಂದರೆ ನಾನು ಹೊರಬರುತ್ತೇನೆ. ಇನ್ನೊಂದರಿಂದ ಇಂದ್ರ ನಿವಾಸದಲ್ಲಿದ್ದ ದೀಪದ ಮೊಲ್ಲೆ ಎಂಬ ಪ್ರತಿಮೆಯಂಥ ಚೆಲುವೆ ಕೈಯಲ್ಲಿ ದೀಪ ಹಿಡಿದುಕೊಂಡು ಹೊರಬರುತ್ತಾಳೆ. ಅನಂತರ ನಮ್ಮಿಬ್ಬರಿಗೆ ಮದುವೆ ಮಾಡಿ. ಹೀಗಾದರೆ ಮದುವೆಯುಂಟು, ಇಲ್ಲದಿದ್ದರೆ ಇಲ್ಲ"[9] ಎಂದು ಹೇಳುವ ರಾಜಕುಮಾರನ ಮಾತುಗಳು ನಿಸರ್ಗದ ನಿಯಮಗಳಿಗೆ ವಿರುದ್ಧವಾದ ಮಾತುಗಳನ್ನು ಧ್ವನಿಸುತ್ತವೆ. ಪ್ರತಿಯೊಬ್ಬ ಪುರುಷನಲ್ಲಿ ಸ್ತ್ರೀಯತ್ವ ಇದ್ದೇ ಇರುತ್ತದೆ. ಈ ಸ್ತ್ರೀಯತ್ವವು ಸ್ತ್ರೀಯನ್ನು ಗೌರವಿಸುವ, ಪ್ರೀತಿಸುವ, ಸಮಾನವಾಗಿ ಕಾಣುವ ಮನೋಭಾವನೆಯಲ್ಲಿ ಇರಬೇಕೇ ಹೊರತು ತನ್ನೊಳಗಿರುವ ಸ್ತ್ರೀಯತ್ವವನ್ನು ಸೀಳುವ ಯೋಚನೆ ಮಾಡಬಾರದು ಎಂದು ಕಂಬಾರರು ಈ ಮೂಲಕ ತಿಳಿಸುತ್ತಾರೆ.

ರಾಜಕುಮಾರ ಶಿವನಾಗದೇವನು ಹೇಳಿದಂತೆ ಈತನ ಶರೀರವನ್ನು ಎರಡು ಹೋಳು ಮಾಡಿದಾಗ ಒಂದು ಮಡಕೆಯಿಂದ ರಾಜಕುಮಾರ ಮರಳಿ ಬಂದರೆ; ಇನ್ನೊಂದು ಮಡಕೆಯಿಂದ ಸರ್ಪ ಬರುತ್ತದೆ. ನಿಸರ್ಗಕ್ಕೆ ವಿರುದ್ಧವಾಗಿ ಇಂತಹ ಕಾರ್ಯವನ್ನು ಮಾಡಿದಾಗ ರಾಜಕುಮಾರನು ಮನಸ್ಸಾಗಿ ಬಂದರೆ, ರಾಜಕುಮಾರನ ಶರೀರ ಸರ್ಪವಾಗಿ ಹೋಯಿತು. ಇಲ್ಲಿ ದೇಹ ಮನಸ್ಸುಗಳು ಒಡೆದು ವಿಕೃತಿಯಾದ ಪರಿಸರವನ್ನು ತಿಳಿಸುತ್ತದೆ. ದೃಶ್ಯ ಏಳರಲ್ಲಿ ಶಿವನಾಗನು ಮಾಡುತ್ತಿರುವ ವ್ಯತಿರಿಕ್ತ ಕಾರ್ಯದ ಬಗ್ಗೆ ತಾಯಿ ಹಾಗೂ ಭಾಗವತರ ಸಂಭಾಷಣೆ ಬರುತ್ತದೆ. ಸಿರಿಸಂಪಿಗೆಯ ಜೊತೆಗೆ ಯಾವುದೆ ಸಂಭಾಷಣೆ ಇಲ್ಲದ ಮಗನನ್ನು ನೆನೆದು ದುಃಖವನ್ನು ತೋಡಿಕೊಳ್ಳುತ್ತಾಳೆ. ಮಗನು ಸಿರಿಸಂಪಿಗೆಯನ್ನು ಮದುವೆಯಾದರೂ, ಇನ್ನೂ ಸಿಗಲಾರದ ದೀಪದ ಮೊಲ್ಲೆಯನ್ನೇ ಹುಡುಕುತ್ತಿದ್ದಾನೆ. ಇದು ಪುರಷನ ಅಸಹಜ ಮನಸ್ಥಿತಿಯನ್ನು ತೋರಿಸುತ್ತದೆ. ದೃಶ್ಯ ಎಂಟರಲ್ಲಿ ಬರುವ ಕಾಳಿಂಗನ ಪಾತ್ರವು ರಾಜಕುಮಾರನಿಂದ ಸೀಳಿಹೋದ ಇನ್ನೊಂದು ಶರೀರವಾಗಿದ್ದು, ಇದು ರಾಜಕುಮಾರನಿಂದ ಸೀಳಿದ ಇನ್ನೊಂದು ಶರೀರ ಎಂದು ಈತನಿಗೂ ಗೊತ್ತಿಲ್ಲ ಹಾಗೂ ರಾಜಕುಮಾರನಿಗೂ ಗೊತ್ತಿಲ್ಲ. ಈತ ಪಾತಾಳ ಲೋಕದಲ್ಲಿದ್ದರೂ ಭೂಮಿಯ ಮೇಲಿನ ಹೆಣ್ಣೊಬ್ಬಳನ್ನು ಕೂಡುವ ಬಯಕೆಯಾಗಿದೆ. ಈ ಕಾಳಿಂಗನು ಅರಮನೆಯಲ್ಲಿನ ಸಿರಿಸಂಪಿಗೆಯನ್ನು ಬೇಟಿಯಾಗುತ್ತಾನೆ.

ಕಾಳಿಂಗನನ್ನು ನೋಡಿದ ಸಿರಿಸಂಪಿಗೆಯು, "ಯಾರು ಈತ? ಪಂಚಭೂತಗಳೇ ಕೂಡಿ ಒಂದಾಗಿ ಆಕಾರಗೊಂಡಂತೆ ಹುತ್ತದ ಕಡೆಯಿಂದ ನಡೆದು ಬಂದನಲ್ಲಾ. ಸುಮಾರು ಸಮಯದಿಂದ ನನ್ನ ಬೆನ್ನಟ್ಟಿ ಬರುತ್ತಿದ್ದಾನೆ. ಹೋದ ಹೋದಲ್ಲೆಲ್ಲಾ ನನ್ನನ್ನೇ ಹಸಿದ ಕಣ್ಣುಗಳಿಂದ ನೋಡುತ್ತಿದ್ದಾನೆ. ಇವನು ಕಾಲಿಟ್ಟಲ್ಲೆಲ್ಲಾ ಚಕಮಕಿ ಬೆಂಕಿ ಹರಿದಾಡುವಂತೆ ಕಾಣುತ್ತಿದೆಯಲ್ಲ! ನನಗೆ ಗೊತ್ತಿಲ್ಲದ ಹಾಗೆ ನನ್ನ ಮನಸ್ಸಿನಲ್ಲಿ ದಾಖಲಾಗಿರುವ ಇವನ ರೂಪ ನೋಡುತ್ತಿದ್ದಂತೆ ನಮ್ಮ ತಾಪಗಳು ಮ್ಯಾಲೇರಿ ಬರುತ್ತಿವೆ. ಈತನಕ ನಮಗೆ ಗೊತ್ತಿಲ್ಲದ ಕೊರತೆಗಳು ಈಗ ಬಾಯಿ ತೆರೆದು ನಿಂತಿವೆ. ಯಾರೀತ?"[10] ಎಂದು ಹೇಳುವ ಸಿರಿಸಂಪಿಗೆಯು ಈವರೆಗೂ ತಾನು ಬಯಸಿದ ಕಾಮದ ಬಯಕೆಗಳ ಕುರಿತು ಅಂದುಕೊಳ್ಳುತ್ತಿದ್ದಾಳೆ. ಮುಂದುವರೆದು ಸಿರಿಸಂಪಿಗೆಯು ಹೀಗೆ ಹೇಳಿಕೊಳ್ಳುವಂತದ್ದು, "ಬಿರುಗಾಳಿಗೆ ಸಿಕ್ಕು ತಲೆಕೆಳಗಾದ ದೋಣಿಯ ಹಾಗಾಗಿದ್ದೇನೆ. ಹದಿಹರೆಯದ ನನ್ನ ಎದೆಯ ಕದಗಳನ್ನು ಯಾರೋ ತೆಗೆದು ಮಲಗಿರುವ ಆಸೆಗಳನ್ನೆಲ್ಲಾ ತಿವಿದು ಎಬ್ಬಿಸುವಂತಿದೆಯಲ್ಲ. ಥೇ, ಇಂಥಾ ಕ್ಷುದ್ರ ಆಸೆಗಳಿಗೆ ನನ್ನ ವಿವೇಕವನ್ನು ಬಲಿಕೊಡಬಾರದು. ಪರನಾರಿಯನ್ನು ಬಯಸಿ ಬರುತ್ತಿರುವ ಅವನನ್ನು ಮಾತಾಡಿಸಿ ಛೀಮಾರಿ ಹಾಕಿ ಕಳಿಸುತ್ತೇನೆ"[11] ಎಂದು ಹೇಳುವ ಈ ಮಾತುಗಳು ಸ್ತ್ರೀಯೊಳಗೆ ಸೂಪ್ತವಾಗಿರುವ ಕಾಮದ ಬಯಕೆಗಳನ್ನು ತಿಳಿಸುತ್ತ; ಈ ಪುರುಷನನ್ನು ಕೂಡಬೇಕು ಎಂಬ ಸೂಪ್ತ ಕಾಮದ ಬಯಕೆಯಾದರೆ; ನಾನು ಮದುವೆಯಾದ ಹೆಣ್ಣು ಎಂಬ ವಿವೇಕಕ್ಕೆ ಒಳಗಾಗಿ ಸಿರಿಸಂಪಿಗೆಯು ಒಂದು ಕಡೆ ಪ್ರೀತಿಗಾಗಿ ಹಂಬಲಿಸುವ; ಇನ್ನೊಂದು ಕಡೆ ಮದುವೆ ಎಂಬ ಸಾಮಾಜಿಕ ಕಟ್ಟಳೆಗೆ ಒಳಗಾದ ಸ್ಥಿತಿಯನ್ನು ತಿಳಿಸುತ್ತಾ; ಮಹಿಳೆಯು ಈ ಎರಡು ನೆಲೆಯಿಂದ ಹೇಗೆ ಪಾರಾಗಬೇಕೆಂಬುದನ್ನು ತಿಳಿಸುತ್ತದೆ.

ದೃಶ್ಯ ಒಂಬತ್ತರಲ್ಲಿ ಭಾಗವತ ಮತ್ತು ಕಮಲಳ ಸಂಭಾಷಣೆ ಬರುತ್ತದೆ. ಕಮಲಳು ಭಾಗವತರಿಗೆ ಹೇಳುತ್ತ, "ಅಯ್ಯಾ ಭಾಗವತರೇ, ಮದುವೆಯಾಗಿ ಸುಮಾರು ದಿನಗಳಾದರೂ ಪತಿದೇವರಲ್ಲಿ ನನ್ನ ಬಗ್ಗೆ ಪ್ರೀತಿಯುಂಟಾಗಲಿಲ್ಲ. ಪ್ರೀತಿಯಿಲ್ಲದೆ ಮಕ್ಕಳ ಫಲಪುತ್ರ ಸಂತಾನ ಉಂಟೆ? ಮನೆಯ ಕಂಬಗಳಲ್ಲಿ ಒಂದೊಂದು ಕಂಬಕ್ಕೆ ಒಂದೊಂದು ವಾರ ಒರಗಿ ನಿಂತು ಕಾಪಾಡು ದೇವರೇ ಅಂತ ನಿಟ್ಟುಸಿರಿಟ್ಟೆ. ಮೊನ್ನೆಯ ದಿನವಷ್ಟೆ ಕುಲದೇವರ ಕರುಣೆಯಾಯಿತು. ಸ್ವಪ್ನದಲ್ಲಿ ಕಾಣಿಸಿ, ಮಗಳೇ ಊರಾಚೆಯ ಆಲದ ಮರದಡಿಯ ಹುತ್ತದಲ್ಲೊಂದು ಅರಳು ಮಲ್ಲಿಗೆ ಬಳ್ಳಿಯಿದೆ. ಪೂಜೆ ಮಾಡಿ, ಹೂ ಹರಿದು ಮಾಲೆ ಮಾಡಿ ಗಂಡನಿಗೆ ಹಾಕಿದರೆ ಅವನು ಸರ್ಪವಾಗಿ ಪರಿವರ್ತನೆಗೊಂಡು ನಿನ್ನ ಸೇರುತ್ತಾನೆ. ಹಾಗೆ ಸೇರಿದರೆ ಸಂತಾನವುಂಟು; ಇಲ್ಲದಿದ್ದರಿಲ್ಲ ಎಂದು ಅಪ್ಪಣೆ ಕೊಡಿಸಿದರು. ಅದಕ್ಕೆ ಹೊರಟಿದ್ದೇವೆ"[12] ಎಂದು ಹೇಳುವ ಕಮಲಾಳು ತನ್ನ ಸಂತಾನದ ಬಯಕೆ ಹಾಗೂ ಅದರಿಂದ ಪರಿಹಾರದ ಕನಸನ್ನು ಕಾಣುತ್ತಿರುವ ಸಂದರ್ಭವನ್ನು ಸೂಚಿಸುತ್ತದೆ.

ಕಾಳಿಂಗನಿಂದ ಕೂಡಿದ ಸಿರಿಸಂಪಿಗೆಯು ಗರ್ಭ ಧರಿಸುತ್ತಾಳೆ. ಇದನ್ನು ತಿಳಿದ ರಾಜಕುಮಾರನು ಸಿರಿಸಂಪಿಗೆಯ ಮೇಲೆ ಅಕ್ರಮ ಸಂಬಂಧ ಎಂಬ ಕಳಂಕವನ್ನು ಹೊರಿಸುತ್ತಾನೆ. ಮತ್ತೇ ಹಿರಿಯರನ್ನು ಕೂಡಿಸಿ ಇದಕ್ಕೆ ನ್ಯಾಯ ಕೇಳುತ್ತಾನೆ. ಇಲ್ಲಿ ಸಿರಿಸಂಪಿಗೆಯೇ ಕಠಿಣ ಪರೀಕ್ಷೆ ಮಾಡಿಕೊಂಡು ಶುದ್ಧಳಾಗಿರುವುದನ್ನು ತೋರಿಸುತ್ತಾಳೆ. ಸಿರಿಸಂಪಿಗೆ ಹೇಳುವಂತೆ, "ಅಗೋ ನಾಗಲಿಂಗನ ಮೇಲೆ ಹರಿದಾಡೋ ಹಾವಿದೆಯಲ್ಲ. ಅದನ್ನು ನನ್ನ ಮೈಮೇಲೆ ಹಾಕಿಕೊಳ್ಳುತ್ತೇನೆ. ನಾನು ಪರಿಶುದ್ಧಳೇ ಆಗಿದ್ದರೆ ಅದು ಕಚ್ಚದೇ ಮೈಮೇಲೆ ಹರಿದು ಸರಿದು ಹೋಗುತ್ತದೆ. ಅದಿಲ್ಲ, ಕಚ್ಚಿ ವಿಷವಾಗುತ್ತದೆ. ಈ ದಿವ್ಯದಲ್ಲಿ ಸತ್ವಪರೀಕ್ಷೆಯೂ ಇದೆ ಶಿಕ್ಷೆಯೂ ಇದೆಯಾಗಿ ಒಪ್ಪಿಗೆಯೋ?"[13] ಎಂದು ಕೇಳುತ್ತಾಳೆ. ಈ ರೀತಿಯಾಗಿ ಧೈರ್ಯದಿಂದ ಪರೀಕ್ಷೆಗೆ ಒಡ್ಡಿಕೊಳ್ಳುವ ಮಹಿಳೆಯು, ಇಂತಹ ಪುರುಷ ವರ್ಗದ ಮನೋಭೂಮಿಕೆಯಿಂದ ವಿಮೋಚನೆಗೊಳ್ಳುವ ನೆಲೆಯನ್ನು ಕಾಣುತ್ತೇವೆ. ನಾಟಕದ ಹದಿಮೂರನೆಯ ದೃಶ್ಯದಲ್ಲಿ ಕಾಳಿಂಗನು ಕೂಸಿನ ಮುಖ ನೋಡಲು ಸಂಪಿಗೆಯ ಹತ್ತಿರ ಬಂದಂತಹ ಸಂದರ್ಭ. ಈಗಾಗಲೇ ರಾಜನು ಸಿರಿಸಂಪಿಗೆಯ ಸುತ್ತಲೂ ಕಾವಲಿರಿಸಿದ್ದಾನೆ. ಸಿರಿಸಂಪಿಗೆಯು ಕಾಳಿಂಗನಿಗೆ ಕಾವಲಿನ ಅರಿವನ್ನು ಮಾಡಿಸಿಕೊಡುತ್ತ ಸಿರಿಸಂಪಿಗೆ ಹೇಳುವಂತದ್ದು, "ನನಗೂ ನನ್ನ ಜವಾಬ್ದಾರಿ ಮತ್ತು ಮರ್ಯಾದೆ ಇವೆ, ಕಾಳಿಂಗಾ ದಯಮಾಡಿ ಹೊರಡು"[14] ಎಂದು ಹೇಳುವ ಸಿರಿಸಂಪಿಗೆಯು ಮುಂದಾಗುವ ಅನಾಹುತಗಳಿಂದ ತಪ್ಪಿಸಲು ಕಾಳಿಂಗನಿಗೆ ಹೇಳುತ್ತಿದ್ದಾಳೆ. ಅಷ್ಟೇ ಅಲ್ಲದೇ ತನ್ನತನದ ಅರಿವನ್ನು ಕಾಳಿಂಗನಿಗೆ ಮಾಡಿಸುತ್ತಾಳೆ. ಒಂದು ಕಡೆಗೆ ಶಿವನಾಗದೇವನಿಗೆ ಹೆಂಡತಿಯಾಗಿಯೇ ಬದುಕುವ ಜವಾಬ್ದಾರಿಗಳಿದ್ದರೆ, ತನಗೆ ಹುಟ್ಟಿದ ಮಗುವಿನ ಲಾಲನೆ-ಪಾಲನೆ ಜವಾಬ್ದಾರಿಯನ್ನು ತಿಳಿಸುತ್ತಾಳೆ.

ನಾಟಕದ ದೃಶ್ಯ ಹದಿನಾಲ್ಕರಲ್ಲಿ ಶಿಕ್ಷೆಯ ಕುರಿತು ಮಾತನಾಡುವ ರಾಜನಿಗೆ ಉತ್ತರಿಸುತ್ತಾ ಸಿರಿಸಂಪಿಗೆಯು, "ನಾನಾಗಲೇ ಅರ್ಧ ವಿಧವೆ. ಸದಾ ಅರ್ಧ ವಿಧವೆಯಾಗಿರುವ ದುಃಖ ನಿಮಗೆ ತಿಳಿಯದು ಪ್ರಭು! ನೀವು ಸೀಳಿಕೊಂಡಾಗ ನನ್ನನ್ನು ಸೀಳಿಬಿಟ್ಟಿರಿ. ನೀವೆದುರಿಗಿದ್ದಾಗ ದೇಹ, ಅವನೊಂದಿಗಿದ್ದಾಗ, ಮಲಗಿದ್ದಾಗ ಮನಸ್ಸು ಹೀಗೆ ಸದಾ ಅರ್ಧ ವಿಧವೆಯಾಗಿರುವ ಸ್ಥಿತಿಯಿದೆಯಲ್ಲಾ –

ಅದರಂಥಾ ಹಿಂಸೆ ಇನ್ನೊಂದಿಲ್ಲಾ. ನನಗೆ ದುಃಖ ಎಂದರೆ ನನ್ನನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ. ಒಂಟಿ ನಾನು. ಒಂಟಿತನಕ್ಕೆ ಹೆದರಿ ಜೊತೆಗಾರನನ್ನು ಹುಡುಕುತ್ತೇನೆ. ಸಿಕ್ಕೋರೆಲ್ಲ ಅರೆಮಾನವರು. ಅರೆಮಾನವರಿಗಾಗಿ ಹುಟ್ಟಿದವಳೇ ನಾನು? ಪೂರ್ಣಲಿಂಗ ಶಿವಲಿಂಗ ದೇವರಿಗಾಗಿ ಹುಟ್ಟಿ ಹುಡುಕಿ ಹೊರಟವಳು. ಆದರೆ ಸಿಕ್ಕದ್ದು ಅಪೂರ್ಣಕ್ಕೆ ಅಕ್ರಮವಾಗಿ ಹುಟ್ಟಿದ ಕೂಸು. ಇದು ಹುಟ್ಟಿದ್ದು ವಿಧವೆಗೆ. ಅಕ್ರಮ ಸಂತಾನ ಹೆತ್ತವಳನ್ನು ಕೊಲ್ಲಬೇಕಂತ ಬಂದಿರಲ್ಲವೆ? ಇಗೋ ಸಿದ್ಧಳಾಗಿದ್ದೇನೆ"[15] ಎನ್ನುವ ಮಾತುಗಳು ಒಂದು ಹೆಣ್ಣು ಪಡುವ ದುಃಖ-ಸಂಕಟಗಳನ್ನು ಅರಿವು ಮಾಡಿಕೊಡುತ್ತದೆ. ದ್ವಂದ್ವಾತ್ಮಕ ಮನಸ್ಸಿನ ಪುರುಷನ ಹಿಡಿತದಲ್ಲಿ ಸಿಕ್ಕ ಹೆಣ್ಣು ಬಲಿಪಶುವಾಗುವ ಚಿತ್ರಣವನ್ನು ಇಲ್ಲಿ ಕಾಣುತ್ತೇವೆ.

ನಾಟಕದ ಕೊನೆಯ ಭಾಗದಲ್ಲಿ ರಾಜನಾದ ಶಿವನಾಗದೇವನು ಕಾಳಿಂಗನನ್ನು ಕೊಲ್ಲುತ್ತಾನೆ. ಕಾಳಿಂಗ ಸತ್ತಾಗ ತನ್ನ ದೇಹವು ಸಹಿತ ಅವಸಾನಕ್ಕೆ ಈಡಾದದ್ದನ್ನು ಗಮನಿಸಿದ ಶಿವನಾಗದೇವನು ತನ್ನ ಸೀಳಿಕೊಂಡ ಭಾಗವನ್ನೇ ಕೊಂದೆ ಎಂದು ಅರಿವಾಗುತ್ತದೆ. ರಾಜನು ಸಿರಿಸಂಪಿಗೆಗೆ ಹೇಳುವಂತದ್ದು, "ಅಪಾರ್ಥದ ಕಿಚ್ಚಿನಲ್ಲಿ ಬೇಯುತ್ತಿದ್ದ ನಿನ್ನನ್ನು ಕೊನೆಗಾದರೂ ತಿಳಿದುಕೊಂಡೆ ಎನ್ನಿಸುತ್ತದೆ"[16] ಎಂದು ಹೇಳುವ ಈ ಮಾತು ಪುರುಷನಾದವನು ಸ್ತ್ರೀಯ ವ್ಯಕ್ತಿತ್ವವನ್ನು ಅರಿತುಕೊಂಡು ಜೀವನ ಸಾಗಿಸಬೇಕೆಂಬ ಆಶಯವನ್ನು ಧ್ವನಿಸುತ್ತದೆ. ನಾಟಕದ ಕೊನೆಗೆ ಶಿವನಾಗದೇವನು, "ಇನ್ನೂ ಕೇಳು. ನಮ್ಮ ಮಗ ಸೀಳಿಕೊಳ್ಳದ ಹಾಗೆ ನೋಡಿಕೋ" ಎಂದು ಹೇಳುತ್ತಾನೆ. ಈ ಮಾತು ಪುರುಷನು ದ್ವಂದ್ವಾತ್ಮಕ ಮನಸ್ಸಿನಿಂದ ಬಿಡುಗಡೆ ಹೊಂದುವ ಮಾರ್ಗವನ್ನು ತಿಳಿಸುತ್ತದೆ. ಮಾನವನ ನಿಸರ್ಗ ಸಹಜವಾದ ಕಾಮ, ಪ್ರೇಮಗಳನ್ನು ಆರೋಗ್ಯಯುತವಾದ ಪರಿಸರದಲ್ಲಿ ಸೃಷ್ಟಿಗೊಳಿಸಿಕೊಂಡರೆ ಮಾನವನ ಉನ್ನತಿ ಸಾಧ್ಯವಾಗುತ್ತದೆ. ಇಂತಹ ನಿಸರ್ಗ ಸತ್ಯವಾದ ಅಂಶಗಳ ವಿರುದ್ಧ ಮಾನವನ ಪ್ರವೃತ್ತಿ ಬೆಳೆದರೆ ಎಂತಹ ಅನಾಹುತಗಳು ಸಂಭವಿಸುತ್ತವೆ ಎಂಬ ಸತ್ಯವನ್ನು ಶಿವನಾಗದೇವನ ಅಂತ್ಯದ ಮೂಲಕ ನೋಡಬಹುದಾಗಿದೆ. ಇಂತಹ ಪುರುಷನ ಮನೋಸ್ಥಿತಿಯಲ್ಲಿ ಸ್ತ್ರೀಯು ಯಾವ ತರನಾಗಿ ಕಷ್ಟ-ಕೋಟಲೆಗಳನ್ನು ಅನುಭಾವಿಸುತ್ತಾ ಬದುಕುತ್ತಾಳೆ ಎಂಬುದನ್ನು ತಿಳಿಸುವ ಮೂಲಕ; ಸ್ತ್ರೀಯು ಯಾವುದೇ ಸಂದರ್ಭದಲ್ಲಿಯೂ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಳ್ಳದೆ ಧೈರ್ಯದಿಂದ ಬದುಕುವ ಮಾರ್ಗವನ್ನು ಸಿರಿಸಂಪಿಗೆಯ ಮೂಲಕ ಕಂಬಾರರು ಕಟ್ಟಿಕೊಡುತ್ತ; ಸ್ತ್ರೀ ಸಂವೇದನೆಯನ್ನು ಚಿತ್ರಿಸಿದ್ದಾರೆ.

**ಅಡಿಟಿಪ್ಪಣಿಗಳು:**

1. ಡಾ. ಚಂದ್ರಶೇಖರ ಕಂಬಾರ – 'ಸಿರಿಸಂಪಿಗೆ', ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, 2012, ಪು.ಸಂ. 10.
2. ಅದೇ, ಪು.ಸಂ. 11.
3. ಅದೇ, ಪು.ಸಂ. 11.
4. ಅದೇ, ಪು.ಸಂ. 12.
5. ಅದೇ, ಪು.ಸಂ. 12.
6. ಅದೇ, ಪು.ಸಂ. 13.
7. ಅದೇ, ಪು.ಸಂ. 15.
8. ಅದೇ, ಪು.ಸಂ. 17.
9. ಅದೇ, ಪು.ಸಂ. 22.
10. ಅದೇ, ಪು.ಸಂ. 35.
11. ಅದೇ, ಪು.ಸಂ. 36.
12. ಅದೇ, ಪು.ಸಂ. 40.
13. ಅದೇ, ಪು.ಸಂ. 50.
14. ಅದೇ, ಪು.ಸಂ. 56.
15. ಅದೇ, ಪು.ಸಂ. 61.
16. ಅದೇ, ಪು.ಸಂ. 68.